# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com


ಸಂಖ್ಯೆ ಃ ಕಕೈಪ್ರಮಂ/ಕೇಂ.ಕ/ಆಡಳಿತ-1255(4)/3498/2020-21 ದಿನಾಂಕ ಃ 28-07-2020

## :: ಅಧಿಕೃತ ಜ್ಞಾಪನ ::

ವಿಷಯ ಃ ಮಂಡಳಿಯ ಎಲ್ಲಾ ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕಃ01-01-2020 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ ಃ ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಕಕೈಪ್ರಮಂ/ಕೇಂ.ಕ/ಆಡಳಿತ-1255(4)/2063/2020-21 ದಿನಾಂಕ:22-06-2020.

* * * * *

ದಿನಾಂಕಃ 01-01-2020 ರಲ್ಲಿದ್ದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಎಲ್ಲಾ ವೃಂದಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖಿತ ಪತ್ರದನ್ವಯ ಪ್ರಕಟಿಸಲಾಗಿದ್ದು, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ 30 ದಿವಸಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ನಿಗಧಿತ ಅವಧಿಯಲ್ಲಿ ಲಿಖಿತವಾಗಿ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ಈ ಕೆಳಕಂಡಂತೆ ಪರಿಶೀಲಿಸಲಾಗಿದೆ.

**1. ಶ್ರೀಮತಿ.ವಿ.ಎಸ್.ಶೀಲಾ, ಹಿರಿಯ ಸಹಾಯಕಿ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀಮತಿ.ವಿ.ಎಸ್.ಶೀಲಾ, ಹಿರಿಯ ಸಹಾಯಕಿ ಇವರು ತಮ್ಮ ಆಕ್ಷೇಪಣಾ ಹೇಳಿಕೆಯಲ್ಲಿ ತಮಗೆ ದಿನಾಂಕ:28-07-2018 ರಂದು ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿದ್ದು, ಸದರಿ ಸಂದರ್ಭದಲ್ಲಿ ತಮ್ಮ ಹೆಸರನ್ನು ಕ್ರಮ ಸಂಖ್ಯೆ:03 ರಲ್ಲಿ ಇರಿಸಲಾಗಿದ್ದು, ಆದರೆ ಪ್ರಸ್ತುತ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ.ಎಂ.ದೀಪಾ, ಹಿರಿಯ ಸಹಾಯಕಿ ಮತ್ತು ಶ್ರೀ.ಬಿ.ಎನ್.ಜಗದೀಶ್, ಹಿರಿಯ ಸಹಾಯಕ ಇವರನ್ನು ಮೇಲಿನ ಕ್ರಮಾಂಕದಲ್ಲಿ ತೋರಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಶ್ರೀಮತಿ.ಎಂ.ದೀಪಾ ಇವರು ಸಹಾಯಕಿ ಹುದ್ದೆಗೆ ದಿನಾಂಕ:20.09.2013 ರಂದು ನೇರನೇಮಕಾತಿ ಹೊಂದಿದ್ದು, ಶ್ರೀಮತಿ.ವಿ.ಎಸ್.ಶೀಲಾ, ಇವರು ಸಹಾಯಕ ಹುದ್ದೆಗೆ ದಿನಾಂಕ:03.02.2014 ರಂದು ಪದೋನ್ನತಿ ಹೊಂದಿರುತ್ತಾರೆ.

ಆದಕಾರಣ, ಶ್ರೀಮತಿ.ಎಂ.ದೀಪಾ ಇವರು ಶ್ರೀಮತಿ.ವಿ.ಎಸ್.ಶೀಲಾ ಇವರಿಗಿಂತ ಮೊದಲು ಸಹಾಯಕಿ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ ಸದರಿ ಆಕ್ಷೇಪಣೆಯನ್ನು ತಿರಸ್ಕರಿಸಲಾಗಿದೆ.

ಮುಂದುವರೆದು, ದಿನಾಂಕ:12.07.2018ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡವಳಿಯಲ್ಲಿ ಶ್ರೀ.ಬಿ.ಎನ್.ಜಗದೀಶ್ ಇವರ ಹೆಸರು ಶ್ರೀಮತಿ.ವಿ.ಎಸ್.ಶೀಲಾ ಇವರ ನಂತರದಲ್ಲಿ ಇರುವುದರಿಂದ ಅದರಂತೆ, ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಪರಿಷ್ಕರಿಸಿ ಬದಲಾಯಿಸಲಾಗಿದೆ.

....2

**2. ಶ್ರೀಮತಿ.ಎಸ್.ಎಸ್.ಗೀತಾ, ಹಿರಿಯ ಸಹಾಯಕಿ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀಮತಿ.ಎಸ್.ಎಸ್.ಗೀತಾ, ಹಿರಿಯ ಸಹಾಯಕಿ ಇವರು ತಮ್ಮ ಆಕ್ಷೇಪಣಾ ಹೇಳಿಕೆಯಲ್ಲಿ ತಮಗೆ ದಿನಾಂಕ:28-07-2018 ರಂದು ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿದ್ದು, ಸದರಿ ಸಂದರ್ಭದಲ್ಲಿ ತಮ್ಮ ಹೆಸರನ್ನು ಕ್ರಮ ಸಂಖ್ಯೆ: 02 ರಲ್ಲಿ ಇರಿಸಲಾಗಿದ್ದು, ಆದರೆ ಪ್ರಸ್ತುತ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ.ಎಂ.ದೀಪಾ, ಹಿರಿಯ ಸಹಾಯಕಿ ಇವರನ್ನು ಮೇಲಿನ ಕ್ರಮಾಂಕದಲ್ಲಿ ತೋರಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಶ್ರೀಮತಿ.ಎಂ.ದೀಪಾ ಇವರು ಸಹಾಯಕಿ ಹುದ್ದೆಗೆ ದಿನಾಂಕ:20.09.2013 ರಂದು ನೇರನೇಮಕಾತಿ ಹೊಂದಿರುತ್ತಾರೆ. ಮುಂದುವರೆದು, ಶ್ರೀಮತಿ.ಎಸ್.ಎಸ್.ಗೀತಾ, ಇವರು ಸಹಾಯಕ ಹುದ್ದೆಗೆ ದಿನಾಂಕ:03.02.2014 ರಂದು ಪದೋನ್ನತಿ ಹೊಂದಿರುತ್ತಾರೆ.

ಈ ಹಿನ್ನಲೆಯಲ್ಲಿ ಶ್ರೀಮತಿ. ದೀಪಾ ಇವರು ಶ್ರೀಮತಿ.ಎಸ್.ಎಸ್.ಗೀತಾ, ಇವರಿಗಿಂತ ಮೊದಲು ಸಹಾಯಕಿ ಹುದ್ದೆಗೆ ನೇಮಕಾತಿ ಹೊಂದಿರುವುದರಿಂದ ಪ್ರಸ್ತುತ ನೀಡಲಾದ ಆಕ್ಷೇಪಣೆಯನ್ನು ಪರಿಗಣಿಸಲು ಆಸ್ಪದವಿರುವುದಿಲ್ಲ.

**3. ಶ್ರೀ.ಎಸ್.ಮಂಜುನಾಥ್, ಕಿರಿಯ ಸಹಾಯಕ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀ.ಎಸ್.ಮಂಜುನಾಥ್, ಕಿರಿಯ ಸಹಾಯಕ ಇವರು ಸಲ್ಲಿಸಿರುವ ಆಕ್ಷೇಪಣಾ ಹೇಳಿಕೆಯಲ್ಲಿ ತಾವು ದ್ವಿತಿಯ ಪಿ.ಯು.ಸಿ ಉತ್ತೀರ್ಣಗೊಂಡಿರುವುದಾಗಿ ತಿಳಿಸುತ್ತಾ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಎಸ್.ಎಸ್.ಎಲ್.ಸಿ ಎಂದು ನಮೂದಾಗಿರುವುದಾಗಿ ತಿಳಿಸಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಸದರಿಯವರ ವಿದ್ಯಾಭ್ಯಾಸವನ್ನು ಪಿ.ಯು.ಸಿ ಎಂದು ಪರಿಷ್ಕರಿಸಲಾಗಿರುತ್ತದೆ.

**4. ಶ್ರೀ.ಕಿರಣ್ ಕುಮಾರ್, ಕಿರಿಯ ಸಹಾಯಕ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀ.ಕಿರಣ್ ಕುಮಾರ್, ಕಿರಿಯ ಸಹಾಯಕ ಇವರು ತಾವು ಹೈದರಾಬಾದ್-ಕರ್ನಾಟಕ ವೃಂದದ ಸ್ಥಳೀಯ ಅಭ್ಯರ್ಥಿಯಾಗಿರುವುದರಿಂದ ತಮ್ಮನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಜೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಲು ಕೋರಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಶ್ರೀ.ಕಿರಣ್‌ಕುಮಾರ್, ಕಿರಿಯ ಸಹಾಯಕ ಇವರು 371(ಜೆ) ಪ್ರಮಾಣ ಪತ್ರವನ್ನು ಸಲ್ಲಿಸಿರುವ ಮೇರೆಗೆ ಸದರಿಯವರನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಜೇಷ್ಠತಾಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿರುತ್ತದೆ.

......3

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22265383 ಫ್ಯಾಕ್ಸ್ : 080-22267901
ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com



**5. ಶ್ರೀ.ಉಮೇಶ್.ವಿ, ಕಿರಿಯ ಸಹಾಯಕ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀ.ಉಮೇಶ್.ವಿ, ಕಿರಿಯ ಸಹಾಯಕ ಇವರು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು, ಬಿ.ಎ ಪದವಿ ಉತ್ತೀರ್ಣರಾಗಿರುವುದಾಗಿ ತಿಳಿಸುತ್ತಾ, ಸದರಿ ವಿದ್ಯಾಭ್ಯಾಸವನ್ನು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಕೋರಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಶ್ರೀ.ಉಮೇಶ್.ವಿ, ಕಿರಿಯ ಸಹಾಯಕ ಇವರು ಇಲಾಖಾ ಪರೀಕ್ಷೆ ಉತ್ತೀರ್ಣರಾಗಿರುವ ಬಗ್ಗೆ ಹಾಗೂ ಬಿ.ಎ ಪದವಿ ಉತ್ತೀರ್ಣರಾಗಿರುವ ಕುರಿತು ಅಂಕಪಟ್ಟಿ ಸಲ್ಲಿಸಿರುವುದರಿಂದ ಜೇಷ್ಠತಾ ಪಟ್ಟಿಯಲ್ಲಿ ಪರಿಷ್ಕೃತ ವಿದ್ಯಾಭ್ಯಾಸವನ್ನು ನಮೂದಿಸಲಾಗಿರುತ್ತದೆ.

**6. ಶ್ರೀ.ಸುನೀಲ್.ಜಿ, ಕಿರಿಯ ಸಹಾಯಕ ಇವರು ಸಲ್ಲಿಸಿದ ಆಕ್ಷೇಪಣೆ:-**

ಶ್ರೀ.ಸುನೀಲ್.ಜಿ, ಕಿರಿಯ ಸಹಾಯಕ ಇವರು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವುದಾಗಿ ತಿಳಿಸುತ್ತಾ, ಸದರಿ ಅಂಶವನ್ನು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಕೋರಿರುತ್ತಾರೆ.

ಈ ಕುರಿತು ಪರಿಶೀಲಿಸಲಾಗಿದ್ದು, ಶ್ರೀ.ಸುನೀಲ್.ಜಿ, ಇವರು ಇಲಾಖಾ ಪರೀಕ್ಷೆ ಉತ್ತೀರ್ಣವಾಗಿರುವ ಬಗ್ಗೆ ಅಂಕಪಟ್ಟಿಯನ್ನು ಒದಗಿಸಿರುವುದರಿಂದ ಸದರಿ ಅಂಶವನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿರುತ್ತದೆ.

ಆದ್ದರಿಂದ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ತಾಂತ್ರಿಕ/ತಾಂತ್ರಿಕೇತರ ಹುದ್ದೆಯ ಅಧಿಕಾರಿ/ನೌಕರರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2020 ರಲ್ಲಿದ್ದಂತೆ ತಯಾರಿಸಿ, ಈ ಪತ್ರದೊಂದಿಗೆ ಲಗತ್ತಿಸಿ, ಪ್ರಕಟಿಸಲಾಗಿದೆ.

14/8/2020
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ.

ಮಂಡಳಿಯ ಸೂಚನಾ ಫಲಕ ಹಾಗೂ ಮಂಡಳಿಯ ಅಧಿಕೃತ ಜಾಲತಾಣ www.kiadb.in ರಲ್ಲಿ ಪ್ರಕಟಿಸಲಾಗಿದೆ.